ಶ್ರೀ ಜಿ. ನಾರಾಯಣಗೌಡರು.—ಮುಂದೆ ಅವರಿಗೆ ಮಾಡಿಕೊಳ್ಳುವುದಕ್ಕೆ ಸಾಧ್ಯವೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.— ಅದು ಪರಿಶೀಲನೆ ಮಾಡಬೇಕಾದ ವಿಚಾರ.

ಶ್ರೀ ಜಿ. ನಾರಾಯಣಗೌಡರು.— ಅದನ್ನು ಪರಿಶೀಲನೆಮಾಡುತ್ತೀರಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಮಾಡುತ್ತೇವೆ.

ಶ್ರೀ ಎಚ್. ಎಂ. ಚನ್ನಬಸಪ್ಪನವರು (ಮೈಸೂರು ಜಿಲ್ಲೆ).—ಈ ಮಿಲ್ಕ್ ಪರ್ಪಸ್ ಸೊಸೈಟಿಗಳಿಗೆ ಈಗ ನೀವು ಸಿಬ್ಬಂದಿ ಕೊಟ್ಟಿರುವುದರಿಂದ ಈ ಸಿಬ್ಬಂದಿ ಬಗ್ಗೆ ಆಗುವ ಎರಡು ಲಕ್ಷ ರೂಪಾಯಿ ಆಹಾರದ ಇಲಾಖೆಗೆ ಚಾರ್ಜ್ ಆಗುತ್ತದೆಯಲ್ಲವೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹಿಂದೆ ಎಲ್ಲೆಲ್ಲಿ ಆಹಾರದ ಡಿಪೋಗಳಿತ್ತೊ ಅಲ್ಲಿ ಅವುಗಳನ್ನೂ, ಅಲ್ಲದ್ದೆ ಅಳತೆಮಾಡುವವರನ್ನೂ, ಮತ್ತು ಗುಮಾಸ್ತರನ್ನೂ, ಅಲ್ಲಿರುವ ಸರ್ಕಾರ್ ಸೊಸೈಟಿಗೆ ವಹಿಸಿದೆ.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ನಾನು ಕೇಳಿದ್ದು, ನೀವು ಈ ಎರಡು ಲಕ್ಷ ರೂಪಾಯಿಗಳನ್ನು ಆಹಾರದ ಬಾಬಿಗೆ charge ಮಾಡುತ್ತೀರಾ, ಅಥವಾ ಇಲ್ಲವೆ ಎಂದು ಮಾತ್ರ.

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದೇ ಅರ್ಥದಲ್ಲೇ ನಾನು ಉತ್ತರ ಹೇಳಿದ್ದೇನೆ.

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—ಈ ರೀತಿ ಮಾಡುವುದು ಸರಿಯಲ್ಲ, ಅದನ್ನು ಕೋ-ಆಪರೇಟಿವ್ ಸೊಸೈಟಿಗಳಿಗೇ charge ಮಾಡಬೇಕೆಂದು ಆಡಿಟರು ತಮಗೆ ತಿಳಿಸಿಲ್ಲವೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆಡಿಟರು ಹಾಗೆ ಹೇಳಿಲ್ಲ. ಈ ಸೊಸೈಟಿಗಳು ಆಹಾರವನ್ನು ಹಂಚಿಕೆಮಾಡುವುದರ ಜೊತೆಗೆ ಬಾಕಿ ವ್ಯಾಪಾರವನ್ನೂ ಮಾಡುವುದರಿಂದ, ಇನ್ನು ಮುಂದೆ ಅವರೇ ಏಕೆ ತಮ್ಮ ಸಿಬ್ಬಂದಿಯನ್ನು ಏರ್ಪಾಡು ಮಾಡಿಕೊಳ್ಳಕೂಡದೆಂದು ಹೇಳಿದ್ದಾರೆ.

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—ಹಾಗಾದರೆ ಇದನ್ನೇ ಮುಂದುವರಿಸಬೇಕೆಂದು ಈಗ ಆರ್ಡರ್ ಮಾಡಿದ್ದೀರಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—31-5-51 ರ ವರೆಗೂ ಈಗಿನ ಆರ್ಡರೇ ಇದೆ.

ಶ್ರೀ ಎಚ್. ಎಂ ಚೆನ್ನಬಸಪ್ಪನವರು.— ಮುಂದಕ್ಕೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಯೋಚಿಸಬೇಕು.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಹೀಗೆ ನೀವು ನಿಮ್ಮ ಸಿಬ್ಬಂದಿಯನ್ನು ತೆಗೆದುಕೊಂಡುಬಿಟ್ಟರೆ ಅವು self-sufficient ಆಗಿ ಕೆಲಸಮಾಡುತ್ತವೆಯೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ವ್ಯಾಪಾರ ಮಾಡದೆ ಇದ್ದರೆ self-sufficient ಆಗುತ್ತವೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಕಂಟ್ರೋಲ್ ಪದಾರ್ಥಗಳ ವ್ಯಾಪಾರವನ್ನು ಬಿಟ್ಟರೆ ಬಾಕಿ ಪದಾರ್ಥಗಳ ಮಾರಾಟದಿಂದಲೇ ಇವುಗಳು ನಡೆದು ಕೊಂಡು ಹೋಗುವುದು ಸಾಧ್ಯವೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಬಾಕಿಯುದರಿಂದಲೇ maintain ಮಾಡಿಕೊಳ್ಳುವುದು ಕಷ್ಟ.

Mr. SPEAKER.—Question time is over.

UNSTARRED QUESTIONS

(to which answers are laid on the table).

Industrial Concerns taking loans exceeding Rs. 10 lakhs from Government.

*Q.—215. **Sri G. VEERAPPA** (Chitaldrug District—General).—

Will the Government be pleased to state :—

(*a*) the number of Industrial concerns in the State that have taken loans exceeding Rs. 10 lakhs from Government ;

(*b*) whether the Central Industrial Finance Corporation have decided to advance such money to Government and get the loans transferred to their name ;

(*c*) the action taken by Government in this respect ?

A.—**The Hon'ble Sri H. C. DASAPPA** (Minister for Finance and Industries).—

(*a*) Three.

(*b*) The Government are not aware of any such decision.

(*c*) The question is not clear.

Proper distribution of iron and steel products.

*Q.—225. **Sri B. CHANNABYRE GOWDA** (Bangalore District—General).—

Will the Government be pleased to state :—

(*a*) the quantity of iron and steel products annually reserved for public use out of the total quantity manufactured in the Bhadravati Iron and Steel Works ;

(*b*) out of this, the quantity allotted to the people in urban areas and to the people in rural areas ;

(*c*) the procedure adopted for distributing the same to the people in urban areas and rural areas ?

A.—**The Hon'ble Sri H. C. DASAPPA** (Minister for Finance and Industries).—

(*a*) The entire steel production of the Mysore Iron and Steel Works, Bhadravati, comes under the control of the Central Government for distribution

on an all-India basis. Mysore State gets an allotment of 1,700 tons of steel (of which about 1,200 tons in Mysore Steel and the rest other production) annually for non-agricultural purposes.

(*b*) No separate accounts are maintained showing the distribution of steel to the urban and rural population.

(*c*) The procedure for distribution is the same both for urban and rural areas. Applications for steel received from the general public are registered by the Iron and Steel Controller after scrutiny of the plans and estimates by the Civil Engineer attached to the Mysore Iron and Steel Works and allotments made according to the stock position and the need.

Voting of Demands for Grants for 1951-52.

Mr. SPEAKER (The Hon'ble Sri V. Venkatappa).—To day Demands Nos. 11 to 17, both inclusive, will be placed before the House.

A list of the following cut motions has been handed over to the Chair by agreement Nos. 114, 116, 124, 133, 141, 147 and 152 under Demand No. 11; No 1. under Demand No. 13; Nos. 159 and 164, under Demand No. 14; No. 172, under Demand No. 16;

Demand No. 11.—General Administration.

25. General Administration (Except the Sub-major heads B. C. & F.)

The Hon'ble Sri H. C. DASAPPA (Minister for Finance and Industries).—Sir, on the recommendation of His Highness the Maharaja, I beg to move:

"That a sum not exceeding Rs. 25 43,000 be granted to the Government to defray the charges which will come in course of payment during the year ending 31st day of March 1952, in respect of 'General Administration'."

Mr. SPEAKER.—Motion moved:

"That a sum not exceeding Rs. 25,43,000 be granted to the Government to defray the charges which will come in course of payment during the year ending 31st day of March 1952, in respect of 'General Administration'."

ಶ್ರೀ ಮಾದಯ್ಯನವರೇ, ನಿಮ್ಮ ಜೋತಾ ಸೂಚನೆಯಲ್ಲ ಮೊಬಲಗನ್ನು ನರಿಯಾಗಿ ಹೇಳಿಲ್ಲ. ದಿವ್ಯಾಂಡಿನ ಮೊಬಲಗಿಗನುಗುಣವಾಗಿ ಅದನ್ನು ಬದಲಾವಣೆ ಮಾಡಿಕೊಳ್ಳಬೇಕು. ನೀವು Rs. 29,30,000 ಎಂದು ಹೇಳಿದ್ದೀರಿ. ಆದು Rs. 25,43,000 ಎಂದಾಗ ಬೇಕು.

ಈಗ ನಿಮ್ಮ ಜೋತಾ ಸೂಚನೆಯನ್ನು ಸೂಚಿಸಬಹುದು.

Policy pursued towards amelioration of Scheduled Castes.

ಶ್ರೀ ಎಂ. ಮಾದಯ್ಯನವರು (ಮೈಸೂರು ಜಿಲ್ಲೆ—ನಿಮ್ಹಾಪಂಗಡ).—ಸ್ವಾಮಿ, ನನ್ನ ಜೋತಾ ಸೂಚನೆ ಈರೀತಿ ಇದೆ:

"That the demand under the head '25 General Administration' for Rs. 25,43,000 be reduced by Re. 1 (to raise a discussion on the General Administration policy pursued by the Government in respect of amelioration of the scheduled castes.)"

ಸ್ವಾಮಿ, ಹರಿಜನರ ಅಭ್ಯುದಯ ಅಥವ ಹರಿಜನರ cause ಎಂದು ಏನು ಹೇಳುತ್ತೇವೆಯೋ ಅದಕ್ಕೆ ಇತ್ತೀಚೆಗೆ ಒಂದು ಅನಾಥ ಶಿಶುವಿನಂತೆ ಕಾಣುಲ್ಪಟ್ಟಿದೆಯೆಂದು ಹೇಳಿದರೆ ಅದು ಅತಿಶಯೋಕ್ತಿಯಾಗಲಾರದೆಂದು ನಾನು ಭಾವಿಸುತ್ತೇನೆ. ಅದರಲ್ಲಿಯೂ ಮಹಾತ್ಮಾ ಗಾಂಧಿಯವರು ಪರಂಧಾಮವನ್ನೈದಿದ ಮೇಲೆ, ಸ್ವಾತಂತ್ರ್ಯ ಬಂದಮೇಲೆ ಹರಿಜನರಲ್ಲಿ, ನಿಮ್ನ ಪಂಗಡದವರಲ್ಲಿ ಒಂದುವಿಧವಾದ ಕಳವಳ, ಅತೃಪ್ತಿ ಮತ್ತು ಅನಮಾಧಾನ ಇವುಗಳು ದೇಶದ ಎಲ್ಲೆಡೆಗಳಲ್ಲಿಯೂ ಎದ್ದು ಕಾಣುತ್ತಿವೆ. ಇದೆಲ್ಲವನ್ನೂ. ನೋಡಿದರೆ ನನಗೆ ಕೆಲವು ಹಿರಿಯರು ಹೇಳುತ್ತಿದ್ದ ಒಂದು ವಿಷಯ ನೆನಪಿಗೆ ಬರುತ್ತದೆ. ಹಳ್ಳಿಗಳಲ್ಲಿರುವ ಹಳ್ಳಿಯ ಜನರನ್ನು ಪಟ್ಟಣವಾಸಕ್ಕೆ ತರಬೇಡಿ, ಪಟ್ಟಣಗಳಲ್ಲಿರುವ ಆಕರ್ಷಣೀಯಗಳು ಅವರನ್ನು ಕೆಡಿಸುತ್ತವೆ. ಪಟ್ಟಣಗಳಿಗೆ ಬಂದರೆ ಅವರು ಕೆಟ್ಟುಹೋಗುತ್ತಾರೆ. ಅವರು ಹಳ್ಳಿಗಳಲ್ಲಿ ಪ್ರಕೃತಿ ಸೌಂದರ್ಯದ ಮಧ್ಯೆ ವಾಸಮಾಡಿಕೊಂಡು, ಸುಖವಾಗಿ ಅಂದರೆ ಸಾಕಷ್ಟು ಅನ್ನ ಬಿಟ್ಟೆ ಹೊಂದಿಸಿಕೊಂಡು ಒಂದು ನೈತಿಕ ಮಟ್ಟದಲ್ಲಿ ವಾಸಮಾಡಿಕೊಂಡಿದ್ದರೆ ಸಾಕು ಎಂದು.

Sri V. S. NARAYANA RAO (Bangalore City General).—I protest against this insinuation. ಪಟ್ಟಣವಾಸಿಗಳೆಲ್ಲರೂ ಕೆಟ್ಟವರೆ?

ಶ್ರೀ ಎಂ. ಮಾದಯ್ಯನವರು.—ಪಟ್ಟಣವಾಸದಲ್ಲಿರುವ ಆಕರ್ಷಣೀಯ ವಿಷಯಗಳಿಗೆ ಬಲಿಯಾಗಿ ಅವರು ಕೆಟ್ಟುಹೋಗುತ್ತಾರೆಂದು ನಾನು ಹೇಳಿದೆನೇ ಹೊರತು ಪಟ್ಟಣದವರು ಕೆಟ್ಟವರೆಂದು ಹೇಳಲಿಲ್ಲ.

ಹರಿಜನರನ್ನು ಎಲ್ಲರಿಗೂ ಸಮಾನವಾದ ರೀತಿಯಲ್ಲಿ ಮುಂದೆ ತಂದರೆ, ಅವರಿಗೂ equal opportunities ಕೊಟ್ಟು ಮುಂದೆ ತರಬೇಕೆಂಬ ಉದ್ದೇಶದಿಂದ ಪ್ರಯತ್ನಪಟ್ಟರೆ ಅವರೂ ನಾಗರಿಕರಾಗುತ್ತಾರೆ. ಪ್ರಕೃತಿಗೆ ಯಾವ ರೀತಿ ಪಕ್ಷಪಾತವಿಲ್ಲವೋ ಅದೇ ರೀತಿ ಹರಿಜನರನ್ನು ಕಂಡರೆ ಅಂದರೆ ನಿಷ್ಪಕ್ಷಪಾತ ನೀತಿಯನ್ನನುಸರಿಸಿದರೆ ಅವರು ಖಂಡಿತವಾಗಿಯೂ ವಿದ್ಯೆಯಲ್ಲಿಯೂ ಆರ್ಥಿಕಸ್ಥಿತಿಗಳಲ್ಲಿಯೂ ಸರ್ಕಾರಿ ನೌಕರಿಗಳಲ್ಲಿಯೂ ನಾಗರಿಕತೆಯಲ್ಲಿಯೂ ಮುಂದೆ ಬರುತ್ತಾರೆಂದು ಹೇಳುತ್ತೇನೆ.